ಒಂದು ಬಿಯರ್ ಕುಡಿದುಬಿಡೋಣ ಅನ್ನಿಸಿ, ''ಓಕೆ ಬ್ರದರ್'' ಎಂದು ಮುಖ ತೊಳೆದುಕೊಂಡು ರೆಡಿಯಾಗಿಬಿಟ್ಟ. ಸಂಜೆ ಕಾರ್ಯಕ್ರಮ ಮುಗಿದ ಮೇಲೆ ಅನೂಹ್ಯ ತನ್ನನ್ನು ನೋಡಿಕೊಂಡೇ ಕಾರು ಹತ್ತಿ ಹೋದದ್ದು ಕಣ್ಮುಂದೆ ಬಂದು ಥ್ರಿಲ್ ಆದ. ರುಕ್ಮಿಣಿ ಬಾರ್ ಅಂಡ್ ರೆಸ್ಟೋರೆಂಟಿನ ಮೂಲೆಯ ಟೇಬಲ್ಲಿನಲ್ಲಿ ಕುಳಿತು ಗೆಳೆಯರು ಮ್ಯಾಕ್ಡೊವೆಲ್‌ಹೌಸ್ ವಿಸ್ಕಿ ಕುಡಿಯುತ್ತಿದ್ದರೆ, ಬ್ರೆಕ್ಟನು ಕಿಂಗ್‌ಫಿಶರ್ ಬಿಯರ್ ಕುಡಿಯುತ್ತಿದ್ದ. ಬಿಯರಿನ ನೊರೆಯಲ್ಲಿ ಅಪ್ಪಅಮ್ಮ, ಕೇರಿಯ ಜನ ಮತ್ತು ಅನೂಹ್ಯ ತನ್ನ ಯಶಸ್ಸನ್ನು ನೋಡಿ ನಗುತ್ತಿರುವಂತೆ ಭಾಸವಾಗುತ್ತಿತ್ತು.

ನರಸಿಂಹ ಮೂರ್ತಿ ಒಂದೊಂದು ಪ್ಲೇಟ್ ತಲೆಮಾಂಸ, ಬೋಟಿ, ಲಿವರ್ ಫ್ರೈ ಆರ್ಡರ್ ಮಾಡಿದವನು ಒಂದು ದೀರ್ಘವಾದ ವಿಸ್ಕಿಯ ಗುಟುಕನ್ನು ಹೊಟ್ಟೆಗಿಳಿಸಿಕೊಂಡು ''ಬ್ರೆಕ್ಟ್, ನೀನು ಅನೂಹ್ಯಳಿಗೆ ಏಕೆ ಟ್ರೈ ಮಾಡಬಾರ್ದು? ಅವಳಿಗೂ ನಿನ್ನ ಮೇಲೆ ತುಂಬಾ ಇಂಟರೆಸ್ಟ್ ಇದ್ದಂಗಿದೆ. ಕ್ಲಾಸಿನಲ್ಲಿ ಎಷ್ಟು ಜನ ಟ್ರೈ ಮಾಡಿದ್ರು ಗೊತ್ತಾ. ಯಾರನ್ನೂ ಕೇರ್ ಮಾಡ್ಲಿಲ್ಲ. ನಿನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಿ ನಗೋದು ನೋಡಿದ್ರೆ ನಂಗೆ ಡೌಟಿದೆ. ಜನರಲ್ ಮೆರಿಟ್‌ನಲ್ಲಿ ಸೀಟು ತಗೊಂಡಿರೋದು ಅವ್ಳು. ತುಂಬಾ ಸ್ಥಿತಿವಂತರ ಥರ ಕೂಡ ಕಾಣ್ತಾಳೆ. ಈ ಸಿಟಿ ಹುಡುಗೀರು ಕ್ಯಾಸ್ಟ್ ಗೀಸ್ಟ್ ಬಗ್ಗೆ ಅಷ್ಟೇನೂ ತಲೆ ಕೆಡಿಸಿಕೊಳ್ಳಲ್ಲ. ಎಂ.ಎ. ಕಂಪ್ಲೀಟ್ ಆಗ್ತಿದ್ದಂಗೆ ನಿಂಗೆ ಯಾವುದಾದರೂ ಕಾಲೇಜಿನಲ್ಲಿ ಗ್ಯಾರಂಟಿ ಲೆಕ್ಚರರ್ ಕೆಲ್ಸ ಸಿಕ್ಕೇ ಸಿಕ್ತದೆ. ಸಾಹಿತ್ಯದಲ್ಲಿ ಆಸಕ್ತಿ ಇರೋದ್ರಿಂದ ಪಿಎಚ್ಡಿಗೂ ಟ್ರೈ ಮಾಡಬಹುದು'' ಎಂದು ಹೇಳಿ ಸಪ್ಲೈರ್ ತಂದಿಟ್ಟ ಬಿಸಿಬಿಸಿ ತಲೆಮಾಂಸದ ತುಂಡೊಂದನ್ನು ಬಾಯಿಗಿಟ್ಟುಕೊಂಡಿದ್ದ. ಮಿಕ್ಕ ಇಬ್ಬರೂ ''ಹೌದು ಬ್ರೆಕ್ಟ್, ಅನೂಹ್ಯ ಬ್ರಾಹ್ಮಿನ್ ಇದ್ದಂಗೆ ಕಾಣ್ತದೆ. ಬ್ರಾಹ್ಮಿನ್ ಹುಡುಗೀರ್ಗೆ ನಮ್ಮ ದಲಿತ್ ಯುವಕರನ್ನು ಕಂಡ್ರೆ ತುಂಬಾ ಅಟ್ರಾಕ್ಷನ್. ಮೈಸೂರ್ ಯೂನಿವರ್ಸಿಟಿಲಿ ಎಷ್ಟೊಂದು ಜನ ನಮ್ಮ ಕಮ್ಯುನಿಟಿಯವರು ಬ್ರಾಹ್ಮಿನ್ ಹುಡುಗೀರನ್ನ ಮದುವೆಯಾಗಿ ಆರಾಮಾಗಿಲ್ಲ ಹೇಳು. ಜಾತಿ ವ್ಯವಸ್ಥೇನ ಒಸಕಿ ಹಾಕ್ಬೇಕಂದ್ರೆ ನಾವು ಧೈರ್ಯವಾಗಿ ಹೆಜ್ಜೆ ಮುಂದಿಡ್ಬೇಕು'' ಎಂದು ಬ್ರೆಕ್ಟನ ಎದೆಯಲ್ಲಿ ಧೈರ್ಯದ ಬೀಜ ಬಿತ್ತಿ ಇನ್ನೊಂದೊಂದು ಪೆಗ್ ವಿಸ್ಕಿ ಹೇಳಿದ್ದರು. ಬ್ರೆಕ್ಟ್ ತಲೆಮಾಂಸ, ಲಿವರ್ ನಂಜಿಕೊಂಡು ಒಂದು ಬಾಟ್ಲು ಬಿಯರ್ ಖಾಲಿ ಮಾಡಿದ್ದ. ಬೇಡಬೇಡವೆಂದರೂ ನರಸಿಂಹ ಮೂರ್ತಿ ಇನ್ನೊಂದು ಪಿಂಟ್ ಬಿಯರ್ ಹೇಳಿದ್ದ. ಗ್ಲಾಸಿಗೆ ಬಿಯರ್ ಬಗ್ಗಿಸಿಕೊಂಡು ಬಾಯಿಗಿಡುವುದಕ್ಕೂ ಮೊಬೈಲ್ ರಿಂಗ್ ಆಗುವುದಕ್ಕೂ ಒಂದೆ ಆಗಿತ್ತು. ಕತೆಯ ಬಹುಮಾನದ ದುಡ್ಡು ಬಂದ ಮೇಲೆ ಮೂರ್ನಾಲ್ಕು ಸಾವಿರದಲ್ಲಿ ಒಂದು ಟಚ್ ಸ್ಕ್ರೀನ್ ಫೋನ್ ತೆಗೆದುಕೊಳ್ಳಬೇಕೆಂದು ಯೋಚಿಸುತ್ತಾ,

''ಹಲೋ'' ಎಂದ. ''ಹಲೋ ಬ್ರೆಕ್ಟ್ ಎಲ್ಲಿದ್ದೀರ್ರಿ...'' ಅನೂಹ್ಯ ಫೋನಿನಲ್ಲಿ!

''ಮೇಡಮ್, ಹಾಸ್ಟೆಲ್ ಹತ್ತಿರ ಇದ್ದೀನಿ'' ಸುಳ್ಳು ಹೇಳಿದ್ದ ತನಗರಿಯದೆ.

''ಭಾನುವಾರ ಬೆಂಗಳೂರಿನಲ್ಲಿ ಇರ್ತೀರಾ'' ಕೇಳಿದ್ದಳು. ''ಯಾಕೆ ಮೇಡಮ್'' ಎಂದು ಕೇಳುತ್ತಾ ಟೇಬಲ್ ಬಳಿಯಿಂದ ಎದ್ದು ಬಾರಿನ ಬಾಗಿಲ ಬಳಿ ನಡೆದಿದ್ದ ಗೆಳೆಯರಿಗೆ ತಿಳಿಯಬಾರದೆಂದು. ಸ್ನೇಹಿತರು ತಮ್ಮ ಲೋಕದಲ್ಲಿ ತಾವು ಮುಳುಗಿದ್ದರು.

''ಮತ್ತೆ ಅದೇನ್ರಿ ಮೇಡಮ್, ಮೇಡಮ್ ಅಂತ ಅಂತೀರಿ. ಭಾನುವಾರ ಇರ್ತೀರೋ ಇಲ್ವೋ ಹೇಳಿ'' ತುಸು ಕೋಪದಲ್ಲೂ ಮಾತು ಮಧುರವಾಗಿದ್ದವು.

''ಇರ್ತೀನಿ ಅನೂಹ್ಯ'' ಎಚ್ಚರಿಕೆಯಿಂದ ಉಚ್ಚರಿಸಿದ್ದ ಬ್ರೆಕ್ಟ್.

''ಹಾಗಾದ್ರೆ ಭಾನುವಾರ ಮಧ್ಯಾಹ್ನ ಒಂದು ಗಂಟೆಗೆ ಬ್ರಿಗೇಡ್ ರಸ್ತೆಯ ಮೈಡ್ರೀಮ್ ಹೋಟೆಲ್‌ಗೆ ಬನ್ನಿ. ನಾನು ನಿಮಗೆ ಪಾರ್ಟಿ ಕೊಡ್ತೀನಿ. ಗುಡ್ ನೈಟ್'' ಎಂದು ಫೋನ್ ಇಟ್ಟಿದ್ದಳು. ಬಿಯರಿನ ಮತ್ತು, ಅನೂಹ್ಯಳ ಮಾತುಗಳು ಬ್ರೆಕ್ಟನನ್ನು ಹಗುರವಾಗಿ ಆಕಾಶದಲ್ಲಿ ತೇಲಿಸಲಾರಂಭಿಸಿದವು.